171 ಶ್ರೀ. ಸಿದ್ದು ಸವದಿ (ತೇರದಾಳ್)
ಜಲ ಸಂಪನ್ಮೂಲ ಸಚಿವರು.

ಅ) ಜಲ ಸಂಪನ್ಮೂಲ ಇಲಾಖೆಯಿಂದ 2009–10ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ಯಾವುವು:

ಜಲ ಸಂಪನ್ಮೂಲ ಇಲಾಖೆಯಲ್ಲಿ ಪ್ರಗತಿಯಲ್ಲಿರುವ 68 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು 2009–10 ನೇ ಸಾಲಿನಲ್ಲಿ ಮುಂದುವರೆಸಲಾಗುತ್ತಿದೆ. ಇದರೊಂದಿಗೆ ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಕಾರ್ಯಕ್ರಮ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಘಟಪ್ರಭಾ ಎಡದಂಡೆಯ ನೀರಾವರಿ ಮಾರ್ಗಗಳನ್ನು ಸುಧಾರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ: ಹಾಗಿದ್ದಲ್ಲಿ, ಅವು ಯಾವುವು:

ಘಟಪ್ರಭಾ ಎಡದಂಡೆ ಕಾಲುವೆ ನೀರಾವರಿ ಮಾರ್ಗಗಳನ್ನು ಸುಧಾರಣೆ ಮಾಡಲು ಮುಖ್ಯ ಹಂಚು ಹಾಗೂ ವಿತರಣಾ ಕಾಲವೆಗಳ 20 ಕ್ಯೂಸೆಕ್ಸ್ ಸಾಮರ್ಥ್ಯಕ್ಕಿಂತ ಹೆಚ್ಚಿಗೆ ಇರುವ ಲೈನಿಂಗ್ ಮಾಡುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. 20 ಕ್ಯೂಸೆಕ್ಸ್ ಸಾಮರ್ಥ್ಯಕ್ಕಿಂತ ಕಡಿಮೆ ಹಾಗೂ 5 ಕ್ಯೂಸೆಕ್ಸ್‌ಕ್ಕಿಂತ ಹೆಚ್ಚಿಗೆ ಇರುವ ಕಾಲುವೆಗಳನ್ನು ಲೈನಿಂಗ್ ಮಾಡುವುದು ಮುಖ್ಯ ಹಂಚು ಹಾಗೂ ವಿತರಣಾ ಕಾಲುವೆಗಳ ಹಳೆಯ ಲೈನಿಂಫ್ ಇರುವ ಕಾಲುವೆಗಳನ್ನು ಹಾಗೂ ಅಡ್ಡಮೋರಿಗಳನ್ನು ರಿಮಾಡಲಿಂಗ್ ಮಾಡುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) ಪ್ರಸಕ್ತ ವರ್ಷ ಮಳೆ ಆಭಾವವಾದ ಕಾರಣ ಕುಡಿಯುವ ನೀರಿಗಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆಯೆ:

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವ ಉಂಟಾದಾಗ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಬೇಡಿಕೆಯ ಮೇರೆಗೆ ಹಿಡಕಲ್ ಹಾಗೂ ಹಿಪ್ಪರಗಿ ಜಲಾಶಯಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣದಲ್ಲಿ ಸಾಧ್ಯವಾದಷ್ಟು ಪ್ರಮಾಣದ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಕಾದಿರಿಸಲಾಗುವುದು.

ಈ) ತೇರದಾಳ ಮತ ಕ್ಷೇತ್ರದಲ್ಲಿ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ:

ತೇರದಾಳ ಮತಕ್ಷೇತ್ರದಡಿಯಲ್ಲಿ ಘಟಪ್ರಭಾ ಯೋಜನೆ ಹಂತ 3 ರಡಿಯಲ್ಲಿ 2009–10 ನೇ ಸಾಲಿಗೆ ರೂ.763.18 ಲಕ್ಷಗಳಷ್ಟು ಮೊತ್ತದಲ್ಲಿ 23 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಹಿಪ್ಪರಗಿ ಯೋಜನೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎರಡು ಪುನರ್ ವಸತಿ ಕೇಂದ್ರಗಳನ್ನು

ನಿರ್ಮಿಸುವದು, ಹೆಚ್ಚುವರಿ ಮುಳುಗಡೆಯಾಗುವ ಜಮೀನುಗಳ ಸ್ವಾಧೀನ ಪಡಿಸಿಕೊಳ್ಳುವುದು ಹಾಗೂ ಕಟ್ಟಡಗಳ ವಿವರವಾದ ಅಳತೆ ತೆಗೆದುಕೊಂಡು ಮೌಲ್ಯಮಾಪನ ನಿರ್ಧರಿಸುವುದು ಇತ್ಯಾದಿ, ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಒಟ್ಟು ರೂ. 3.22 ಕೋಟಿಗಳಷ್ಟು ಮೌಲ್ಯದ 8 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ನೀರಾವರಿ (ಉತ್ತರ) ವಲಯ, ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಯೋಜನೆಗಳ 2008–09ನೇ ಸಾಲಿನಲ್ಲಿ ಪ್ರಗತಿಸಿದ ಸಾಧನೆಗಳು ಈ ಕೆಳಗಿನಂತಿವೆ.

ಯೋಜನೆ	ಆರ್ಥಿಕ (ರೂ.ಕೋಟಿಗಳಲ್ಲಿ)	ಭೌತಿಕ (ಹೇ.ಗಳಲ್ಲಿ)
1)ಘಟಪ್ರಭಾ ಹಂತ–3	58.442	--
2)ಹಿಪ್ಪರಗಿ	80.894	531.32
3)ಮಾರ್ಕಂಡೇಯ	3.361	--
4)ದೂಧಗಂಗಾ	11.735	--
5)ಬಳ್ಳಾರಿ ನಾಲಾ ಯೋಜನೆ	13.560	--
6)ಹಿರಣ್ಯಕೇಶಿ ನದಿಯಿಂದ ಘ.ಬ.ದಂ ಕಾಲುವೆಗೆ ನೀರೆತ್ತುವುದು.	0.400	--
7) ಶ್ರೀ ರಾಮೇಶ್ವರ ಏ.ನೀ.ಯೋ.	10.086	--
8)ಕಿಣಿಯೇ	--	--
ವಲಯದ ಒಟ್ಟು:	178.478	531.32

ತೇರದಾಳ ಹಾಗೂ ಜಮಖಂಡಿ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವರಗಳು ಈ ಕೆಳಗಿನಂತೆ ಇವೆ.

ತೇರದಾಳ ಮತಕ್ಷೇತ್ರದಡಿಯಲ್ಲಿ 2008–09 ನೇ ಸಾಲಿನಲ್ಲಿ ಹಿಪ್ಪರಗಿ ಯೋಜನೆಗೆ ರೂ. 6.09 ಕೋಟಿಗಳಷ್ಟು ಹಾಗೂ ಘಟಪ್ರಭಾ ಯೋಜನೆ ಹಂತ 3 ಕ್ಕೆ 7.61 ಕೋಟಿಗಳಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಜಮಖಂಡಿ ಮತಕ್ಷೇತ್ರದಡಿಯಲ್ಲಿ 2008–09 ನೇ ಸಾಲಿನಲ್ಲಿ ಹಿಪ್ಪರಗಿ ಯೋಜನೆಗೆ ರೂ. 16.51 ಕೋಟಿಗಳಷ್ಟು ಹಾಗೂ ಘಟಪ್ರಭಾ ಯೋಜನೆ ಹಂತ 3 ಕ್ಕೆ 3.58 ಕೋಟಿಗಳಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಅನುಬಂಧ

ಪ್ರಗತಿಯಲ್ಲಿರುವ ಬಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

(ರೂ.ಕೋಟಿಗಳಲ್ಲಿ)

ಕ್ರ.ಸಂ	ಯೋಜನೆ	2009–10 ನೇ ಸಾಲಿನ ಅನುದಾನ
1	ಘಟಪ್ರಭಾ ಹಂತ–3	177.00
2	ಭದ್ರಾ ಆಧುನೀಕರಣ	257.54
3	ತುಂಗಾಭದ್ರಾ ಆಧುನೀಕರಣ	3.57
4	ಬೆಣ್ಣೆತೊರಾ	13.00
5	ಹಿಪ್ಪರಗಿ	206.00
6	ಮಲಪ್ರಭಾ	125.00
7	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1	652.29
8	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–2	
9	ತುಂಗಾ ಮೇಲ್ದಂಡೆ ಯೋಜನೆ	75.00
10	ಮಾರ್ಕಂಡೇಯ	7.00
11	ಸಿಂಗಟಲೂರು	35.00
12	ದೂದ್‌ಗಂಗಾ	16.70
13	ಭೀಮಾ ಏತ ನೀರಾವರಿ	36.00
14	ಕಾರಂಜ	24.97
15	ವಾರಾಹಿ	150.00
16	ಭದ್ರಾ ಮೇಲ್ದಂಡೆ ಯೋಜನೆ	100.00
17	ಅಮರ್ಜಾ	30.00
18	ಇಟಗಿ–ಸಾಸಲವಾಡ ಏತ	4.00
19	ಬಸಾಪುರ ಏತ	4.00
20	ಗಂಡೋರಿನಾಲಾ	18.00
21	ಹಿರೇಹಳ್ಳ	1.90
22	ಮುಲ್ಲಾಮಾರಿ ಕೆಳದಂಡೆ	25.00
23	ಮಸ್ಕಿನಾಲಾ	1.10
24	ಹರಿನಾಲಾ	2.00
25	ಕಳಸನಾಲಾ	10.00
26	ಕೆಂಚನಗುಡ್ಡ ಏತ ನೀರಾವರಿ	1.95
27	ವೈ.ಕಗ್ಗಲ್	0.46
28	ತಿಮ್ಮಾಪುರ ಏ.ನೀ.	1.15
29	ಹೊಡೀರಾಯನಹಳ್ಳ	1.00

30	ಬಕ್ರಿಹಳ್ಳ ಏ.ನೀ.	2.00
31	ಜವಲಹಳ್ಳ ಏ.ನೀ.	1.00
32	ಬಳ್ಳಾರಿನಾಲಾ ಏ.ನೀ.	7.00
33	ಗುಡ್ಡದ ಮಲ್ಲಾಪುರ ಏ.ನೀ.	10.00
34	ರಾಮೇಶ್ವರ ಏ.ನೀ.	6.00
35	ಹಿರಣ್ಯಕೇಶಿ ಏ.ನೀ.	4.00
36	ಕೊಣ್ಣೂರು ಏ.ನೀ.	5.00
37	ಕೊಳಚಿ ಏ.ನೀ.	
38	ಬೆಣ್ಣಹಳ್ಳ ಏ.ನೀ.	
39	ಉಬ್ರಾಣಿ-ಅಮ್ರತಾಪುರ ಏ.ನೀ.	30.00
40	ಸನ್ಯಾಸಿಕೊಪ್ಪ ಏ.ನೀ	7.00
41	ದಂಡಾವತಿ	20.00
42	ತಿಳುವಳ್ಳಿ ಏ.ನೀ.	3.00
43	ಕಿನಾಯೆ	2.00
44	ಶಿಗ್ಗಾಂವ್ ಏ.ನೀ	20.00
45	ಡಿ.ದೇವರಾಜ ಅರಸು ನಾಲೆ	9.87
46	ಹಾರಂಗಿ	18.26
47	ಹೇಮಾವತಿ	111.80
48	ಕಬಿನಿ	71.86
49	ಕೆ.ಆರ್.ಎಸ್.ಆಧುನೀಕರಣ	10.58
50	ಯಗಚಿ	31.22
51	ಅರ್ಕಾವತಿ	21.84
52	ಹುಚ್ಚನಕೊಪ್ಪಲು	8.20
53	ಇಗ್ಗಲೂರು	2.48
54	ಕಾಮಸಮುದ್ರ	2.20
55	ಮಂಚನಬೆಲೆ	0.67
56	ತಾರಕ	1.20
57	ಉಡುತೊರೆಹಳ್ಳ	1.48
58	ಪಾಟೆಹೊಳೆ	0.58
59	ನಂಜಾಪುರ ಏತ	4.24
60	ಮಳಲೂರು ಏ.ನೀ	2.00
61	ಬನಹಳ್ಳಿ ಏತ ನೀರಾವರಿ	3.00
62	ಕಾಚೇನಹಳ್ಳಿ	10.10
63	ಅಂಜನೇಯಪುರ	0.50
64	ಅಡಿಕೆಬೊಮ್ಮನಹಳ್ಳಿ	5.00

C-1055-48

65	ತುಂಗಾ ಐ.ನೀ.	1.00
66	ದಾವಣಗೆರೆಯ 19 ಕೆರೆಗಳು	10.00
67	ಉ.ಕನ್ನಡ ಜಿಲ್ಲೆಯ ಕಾಮಗಾರಿಗಳು	1.00
68	ಅಣೆಕಟ್ಟು ಕಾಲುವೆಗಳ ಆಧುನೀಕರಣ	9.00

13ನೇ ವಿಧಾನ ಸಭೆ 3ನೇ ಅಧಿವೇಶನ

170 ಶ್ರೀ. ಸಿದ್ದು ಸವದಿ (ತೇರದಾಳ್)

ಜಲ ಸಂಪನ್ಮೂಲ ಸಚಿವರು.

ಅ) ಕಂದಾಯ ಇಲಾಖೆಯಿಂದ 2009–10ನೇ ಸಾಲಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು

ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ದೊಡ್ಡ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

ರಾಜ್ಯದ 247 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೆ ಏರಿಸಲು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಈ) ಕಂದಾಯ ಇಲಾಖೆಯಿಂದ ಹೊಸ ತಾಲ್ಲೂಕುಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ? ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು;

ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಶ್ರೀ ಎಂ.ಬಿ.ಪ್ರಕಾಶ್ ರವರ ಅಧ್ಯಕ್ಷತೆಯಲ್ಲಿದ್ದ ತಾಲ್ಲೂಕು ಪುನರ್ ರಚನಾ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರವು ನಿರ್ಣಯ ತೆಗೆದುಕೊಳ್ಳಬೇಕಿದೆ.

ಉ) ಕಂದಾಯ ಇಲಾಖೆಯಿಂದ ಹೊಸ ಸಬ್‌ರಿಜಿಸ್ಟ್ರಾರ್ ಕಛೇರಿ ತೆರೆಯಲು ಹಾಗೂ ತೇರದಾಳದಲ್ಲಿ ಹೊಸ ಸಬ್ ರಿಜಿಸ್ಟ್ರಾರ್ ಕಛೇರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ?

ತೇರದಾಳ್‌ನಲ್ಲಿ ಹೊಸ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸುವ ಕುರಿತು ಜಿಲ್ಲಾ ನೋಂದಣಾಧಿಕಾರಿ ಬಾಗಲಕೋಟೆ ಇವರಿಂದ ಒಂದು ಸಮಗ್ರ ವರದಿಯನ್ನು ಕೇಳಿದ್ದು, ಇವರಿಂದ ವರದಿ ಬಂದ ನಂತರ ಎಲ್ಲಾ ಅಂಶಗಳನ್ನು